9C

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಶಿವಾನಂದ, ಅಧ್ಯಕ್ಷರು, ಜಯಚಾಮರಾಜಪುರ ಗ್ರಾಮ ಪಂಚಾಯತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ರವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ) ಮತ್ತು 48(4) ಅಡಿಯಲ್ಲಿ ಕ್ರಮ ಜರುಗಿಸುವ ಬಗ್ಗೆ.

ಓದಲಾಗಿದೆ:

1. ಅಪರ ಪೊಲೀಸ್ ಮಹಾನಿರ್ದೇಶಕರು, ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ಇವರ ಪತ್ರ ಸಂಖ್ಯೆ:ಎಸಿಬಿ/ತುಮಕೂರು/ಮೊ.ಸಂ:04/2017, ದಿನಾಂಕ:22-04-2017.
2. ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ತುಮಕೂರು ಜಿಲ್ಲೆ ರವರ ಪತ್ರ ಸಂಖ್ಯೆ:ತುಜಿಪ:ಅಭಿ:ವಿವ-03:ಗ್ರಾ.ಪಂ.ಅಧ್ಯಕ್ಷರು:ಎಸಿಬಿ:25/2017-18, ದಿನಾಂಕ:12-05-2017.
3. ಸರ್ಕಾರದ ಇದೇ ಸಮಸಂಖ್ಯೆಯ ದಿನಾಂಕ:29-05-2017 ರ ಕಾರಣ ಕೇಳುವ ನೋಟೀಸು.
4. ಶ್ರೀ ಶಿವಾನಂದ, ಅಧ್ಯಕ್ಷರು, ಜಯಚಾಮರಾಜಪುರ ಗ್ರಾಮ ಪಂಚಾಯತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ರವರ ಲಿಖಿತ ಹೇಳಿಕೆ ದಿನಾಂಕ:05-06-2017, 15-07-2017 ಮತ್ತು 30-11-2017.
5. ಸರ್ಕಾರದ ಸಮಸಂಖ್ಯೆಯ ವಿಚಾರಣಾ ನೋಟೀಸ್, ದಿನಾಂಕ:11-07-2017 ಮತ್ತು 28-10-2017.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಅಪರ ಪೊಲೀಸ್ ಮಹಾನಿರ್ದೇಶಕರು, ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ಇವರ ಪತ್ರದಲ್ಲಿ ಶ್ರೀ ಸುಧೀರ್ ಹೆಚ್.ಡಿ. ಬಿನ್ ದಕ್ಷಿಣಾಮೂರ್ತಿ, ಹಾಲ್ಗುಣ ಗ್ರಾಮ, ಶೆಟ್ಟಿಕೆರೆ ಹೋಬಳಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ಇವರು ತಮ್ಮ ಜಮೀನಿನ ಸರ್ವೆ ನಂ.127ರಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಇ. ಅಡಿಯಲ್ಲಿ ಅನುಮತಿ ಪಡೆದು ಕೃಷಿ ಹೊಂಡ, ಕೊಟ್ಟಿಗೆ, ಹುಡಿಬದು ಕೆಲಸಗಳನ್ನು ಮಾಡಿ ಮುಕ್ತಾಯಗೊಳಿಸಿದ್ದು, ಈ ಸಂಬಂಧ ಅವರಿಗೆ ಬರಬೇಕಾದ ರೂ.70,000/-ಗಳ ಪೈಕಿ ರೂ.35,000/-ಗಳನ್ನು ಮೊತ್ತವನ್ನು ಈ ಹಿಂದೆ ಬಿಡುಗಡೆ ಮಾಡಲಾಗಿದ್ದು, ಬಾಕಿ ಉಳಿದ ರೂ.35,000/-ಗಳನ್ನು ಬಿಡುಗಡೆ ಮಾಡಲು ಕೇಳಿದಾಗ ಸದರಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀ ಶಿವಾನಂದ ಇವರು ರೂ.10,000/-ಗಳ ಲಂಚದ ಹಣಕ್ಕೆ ಒತ್ತಾಯಿಸಿದ್ದು, ಇದಕ್ಕೆ ಪಿರ್ಯಾದುದಾರರು ಅಷ್ಟು ಹಣ ಕೊಡಲು ಆಗವುದಿಲ್ಲವೆಂದಾಗ ಆರೋಪಿತರು ರೂ.3,000/-ಗಳ ಹಣ ಕೊಡಲೇಬೇಕೆಂದು ಒತ್ತಾಯಿಸಿದಾಗ, ಲಂಚದ ಹಣ ನೀಡಿ ಕೆಲಸ ಮಾಡಿಸಿಕೊಳ್ಳಲು ಇಷ್ಟವಿಲ್ಲದ ಪಿರ್ಯಾದುದಾರರು ಸ್ಥಳೀಯ ಭ್ರಷ್ಟಾಚಾರ ನಿಗ್ರಹ ದಳ, ಪೊಲೀಸ್ ಠಾಣೆ, ತುಮಕೂರು ಜಿಲ್ಲೆ ಇವರಲ್ಲಿ ದಾಖಲಿಸಿದ ದೂರಿನ ಅನುಸಾರ ಆರೋಪಿತರಿಗೆ ದಿನಾಂಕ:06/04/2017 ರಂದು ರೂ.3,000/-ಗಳ ಲಂಚದ ಹಣವನ್ನು ನೀಡಿ ಆರೋಪಿತರು ಪಡೆಯುವಾಗ ಎಸಿಬಿ ಪೊಲೀಸ್‌ರ ಟ್ರಾಪ್ ಕಾರ್ಯಚರಣೆಯಲ್ಲಿ ಸಿಕ್ಕಿ ಬಿದ್ದಿದ್ದು, ತನಿಖೆ ಕೈಗೊಳ್ಳಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿಯವರನ್ನು ದಿನಾಂಕ:06/04/2017 ರಂದು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನದಲ್ಲಿ ಇರಿಸಲಾಗಿದ್ದು, ಸದರಿಯವರನ್ನು ಅಧ್ಯಕ್ಷ ಸ್ಥಾನದಲ್ಲಿಯೇ ಮುಂದುವರೆಸಿದ್ದೇ ಆದಲ್ಲಿ, ಸದರಿಯವರು ಈ ಪ್ರಕರಣದ ತನಿಖೆಗೆ ಅವಶ್ಯವಿರುವ ದಾಖಲಾತಿಗಳನ್ನು ನಾಶಪಡಿಸುವ ಅಥವಾ ತಿರುಚುವ ಸಾಧ್ಯತೆಗಳಿರುತ್ತವೆ ಹಾಗೂ ಇತರೆ ಸಾಕ್ಷಿದಾರರಿಗೆ ತನ್ನ ಹುದ್ದೆಯ ಪ್ರಭಾವವನ್ನು ಬಳಸಿಕೊಂಡು ಬೆದರಿಕೆ ಒಡ್ಡುವ ಸಾಧ್ಯತೆಗಳಿರುವುದರಿಂದ ಸದರಿಯವರನ್ನು ದಸ್ತಗಿರಿ ಮಾಡಿದ ದಿನಾಂಕದಿಂದ ಅವರ ಗ್ರಾಮ ಪಂಚಾಯತಿ ಸದಸ್ಯತ್ವವನ್ನು ರದ್ದುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ ತುಮಕೂರು ರವರು ಶ್ರೀ ಶಿವಾನಂದ, ಅಧ್ಯಕ್ಷರು, ಜಯಚಾಮರಾಜಪುರ ಗ್ರಾಮ ಪಂಚಾಯತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ರವರು ದಿನಾಂಕ:06.04.2017 ರಂದು ಲಂಚ ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಭ್ರಷ್ಟಾಚಾರ ನಿಗ್ರಹ ದಳ, ತುಮಕೂರು ರವರು ದಾಳಿ ಮಾಡಿ ದಿ:06.04.2017 ರಿಂದ 18.04.2017 ರವರೆಗೆ ನ್ಯಾಯಾಂಗ ಬಂಧನದಲ್ಲಿರಿಸಿದ್ದು, ದಿ:18.04.2017 ರಂದು 2ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯ, ತುಮಕೂರು ರವರ ಜಾಮೀನು ಆದೇಶದಂತೆ ಬಿಡುಗಡೆಯಾಗಿರುತ್ತಾರೆ. ಸದರಿಯವರ ವಿರುದ್ಧ ಕ್ರಮ ಕೈಗೊಳ್ಳುವಂತೆ

ಕೋರಿರುತ್ತಾರೆ. ಇದರೊಂದಿಗೆ ಭ್ರಷ್ಟಾಚಾರ ನಿಗ್ರಹ ದಳ, ಪೋಲಿಸ್ ಠಾಣೆ, ತುಮಕೂರು ರವರು ಸದರಿ ಅಧ್ಯಕ್ಷರ ವಿರುದ್ಧ ದಾಖಲಿಸಿರುವ ಪ್ರಥಮ ವರ್ತಮಾನ ವರದಿ, ದಾಳಿ ನಡೆಸಿದ ಸಂದರ್ಭದಲ್ಲಿ ನಡೆಸಿರುವ ವಿಚಾರಣಾ ವರದಿ, ತುಮಕುರು ಜಿಲ್ಲಾ ಸೆಷನ್ಸ್ ನ್ಯಾಯಾಲಯದ ಜಾಮೀನು ಆದೇಶದ ಪ್ರತಿ ಹಾಗೂ ದೂರವಾಣಿ ಸಂಭಾಷಣೆಯ ವಿವರಗಳನ್ನು ಲಗತ್ತಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ಶ್ರೀ ಶಿವಾನಂದ, ಅಧ್ಯಕ್ಷರು, ಜಯಚಾಮರಾಜಪುರ ಗ್ರಾಮ ಪಂಚಾಯತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ರವರಿಗೆ ಕಾರಣ ಕೇಳುವ ನೋಟೀಸ್‌ನ್ನು ಜಾರಿಗೊಳಿಸಲಾಗಿದ್ದು, ಸದರಿ ಕಾರಣ ಕೇಳುವ ನೋಟೀಸಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ(4) ರಲ್ಲಿ ಶ್ರೀ ಶಿವಾನಂದ ರವರು ತಮ್ಮ ಲಿಖಿತ ಹೇಳಿಕೆಯನ್ನು ಈ ಕೆಳಕಂಡಂತೆ ನೀಡಿರುತ್ತಾರೆ.

> "ಈ ಪ್ರಕರಣದಲ್ಲಿ ದೂರುದಾರರ ಯಾವ ಕೆಲಸವು ನಮ್ಮ ಕಛೇರಿಯಲ್ಲಿ ಬಾಕಿ ಇರಲಿಲ್ಲ ಮತ್ತು ನಾನು ಅವರಿಂದ ಲಂಚದ ಬೇಡಿಕೆ ಕೇಳುವ ಪ್ರಮೇಯವೇ ಇರುವುದಿಲ್ಲ. ಕೇಳುವ ಪ್ರಮೇಯವೇ ಇರುವುದಿಲ್ಲ. ನನ್ನ ವಿರುದ್ಧ ದಾಖಲಾಗಿರುವ ಪ್ರಕರಣವು ನ್ಯಾಯಾಲಯದಲ್ಲಿ ತೀರ್ಮಾನಕ್ಕೆ ಬಾಕಿ ಇರುತ್ತದೆ. ನಾನು ಪ್ರಕರಣದಲ್ಲಿ ಆರೋಪಿತನಾಗಿದ್ದು, ನಾನು ಅಪರಾಧಿ ಎಂದು ತೀರ್ಮಾನವಾಗಿರುವುದಿಲ್ಲ. ನಾನು ಯಾವುದೇ ತಪ್ಪು ಮಾಡಿರುವುದಿಲ್ಲ ಮತ್ತು ಕರ್ತವ್ಯ ನಿರ್ವಹಿಸಲು ಅಸಮರ್ಥನಾಗಿರುವುದಿಲ್ಲ. ನನ್ನ ವಿರುದ್ಧ ಮಾಡಿರುವ ಆರೋಪಗಳು ಸುಳ್ಳಿನಿಂದ ಕೂಡಿರುತ್ತದೆ. ದೂರುದಾರರಾದ ಶ್ರೀಯುತ ಹೆಚ್.ಡಿ.ಸುಧೀರ ಹಾಲುಗೋಣ ಇವರು ಫಲಾನುಭವಿಯಾಗಿರುವುದಿಲ್ಲ. ದಿ:06-04-2017 ರಂದು ಕೊಟ್ಟಿಗೆ ಕಾಮಗಾರಿಯು ಪೂರ್ಣಗೊಂಡಿರುವುದಿಲ್ಲ. ಅಳತೆ ಪುಸ್ತಕವು ಕೂಡ ದಾಖಲಾಗಿರುವುದಿಲ್ಲ. ದಿ:06-04-2017 ರಂದು ನರೇಗಾ ಖಾತೆಯಲ್ಲಿ ಹಣವು ಇರಲಿಲ್ಲ. ಕೂಲಿ ಮೊತ್ತ ರೂ.35,000/-ಗಳನ್ನು ಪಾವತಿ ಮಾಡಲಾಗಿದೆ. ಉಳಿಕೆ ಸಾಮಗ್ರಿ ಮೊತ್ತವನ್ನು ಪಾವತಿ ಮಾಡಲು ತಾಂತ್ರಿಕ ಸಹಾಯಕರು ಕಾಮಗಾರಿ ಪೂರ್ಣಗೊಳ್ಳದೆ ಇರುವುದರಿಂದ ಅಳತೆ ಪುಸ್ತಕದಲ್ಲಿ ಸಾಮಗ್ರಿ ಮೊತ್ತವನ್ನು ನಮೂದಿಸಿರುವುದಿಲ್ಲ. ಸಾಮಗ್ರಿ ಮೊತ್ತದ ಖಾತೆಯಲ್ಲಿ ದಿನಾಂಕ:06-04-2017 ರಂದು ಹಣ ಇರುವುದಿಲ್ಲ. ಅನಾವಶ್ಯಕವಾಗಿ ಈ ಪ್ರಕರಣದಲ್ಲಿ ಎಸಿಬಿ ಅಧಿಕಾರಿಗಳಿಗೆ ಸುಳ್ಳು ಮಾಹಿತಿ ನೀಡಿ ಲಂಚದ ಆರೋಪ ಹೊರಿಸಿರುತ್ತಾರೆ. ಸದರಿ ದೂರುದಾರರು ನಾನು ಪ.ಜಾತಿ ಅಧ್ಯಕ್ಷನಾಗಿರುವುದರಿಂದ ನನ್ನನ್ನು ಪದಚ್ಯುತಿಗೊಳಿಸಲು ನನ್ನ ಮೇಲೆ ದುರುದ್ದೇಷದಿಂದ ಸುಳ್ಳು ಪ್ರಕರಣವನ್ನು ಸೃಷ್ಟಿಸಿ ಎಸಿಬಿ ಬಲೆಗೆ ಬೀಳಿಸಿರುತ್ತಾರೆ. ನಾನು ಸಲ್ಲಿಸಿರುವ ಸಾಕ್ಷ್ಯಾಧಾರಗಳ ದಾಖಲೆಗಳನ್ನು ಪರಿಗಣಿಸಿ ನನ್ನನ್ನು ಆರೋಪದಿಂದ ಕೈಬಿಡಲು ತಮ್ಮಲ್ಲಿ ಪಾರ್ಥಿಸಿಕೊಳ್ಳುತ್ತೇನೆ" ಎಂದು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (5) ರನ್ವಯ ಶ್ರೀ ಶಿವಾನಂದ, ಅಧ್ಯಕ್ಷರು, ಜಯಚಾಮರಾಜಪುರ ಗ್ರಾಮ ಪಂಚಾಯತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ರವರ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ನ್ಯಾಯಾಲಯದಲ್ಲಿ ದಿನಾಂಕ:15-07-2017 ಮತ್ತು 03-11-2017 ರಂದು ಜರುಗಿದ ವಿಚಾರಣೆಯಲ್ಲಿ ಆಪಾದಿತ ಅಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಜಯಚಾಮರಾಜಪುರ ಗ್ರಾಮ ಪಂಚಾಯತಿ; ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಚಿಕ್ಕನಾಯಕನಹಳ್ಳಿ, ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯತಿ ತುಮಕೂರು ರವರು ಹಾಜರಾಗಿರುತ್ತಾರೆ. ಅಧ್ಯಕ್ಷರು ತಮ್ಮ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ಲಭ್ಯವಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ, ಆರೋಪಿತರು ರೂ.3,000/-ಗಳ ಲಂಚದ ಹಣವನ್ನು ಪಡೆಯುವಾಗ ಎಸಿಬಿ ಪೊಲೀಸ್‌ರ ಟ್ರಾಪ್ ಕಾರ್ಯಾಚರಣೆಯಲ್ಲಿ ಸಿಕ್ಕಿ ಬಿದ್ದಿರುವ ಆರೋಪವು ಮೇಲ್ನೋಟಕ್ಕೆ ಸಾಬೀತಾಗಿರುವ ಹಿನ್ನೆಲೆಯಲ್ಲಿ ಶ್ರೀ ಶಿವಾನಂದ, ಅಧ್ಯಕ್ಷರು, ಜಯಚಾಮರಾಜಪುರ ಗ್ರಾಮ ಪಂಚಾಯತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ರವರನ್ನು ಅಧ್ಯಕ್ಷ ಸ್ಥಾನದಿಂದ ವಜಾ ಮಾಡಿ ಸದಸ್ಯತ್ವ ರದ್ದುಪಡಿಸಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 520 ಗ್ರಾಪಂಅ 2017 ಬೆಂಗಳೂರು, ದಿನಾಂಕ:17-02-2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಶಿವಾನಂದ, ಅಧ್ಯಕ್ಷರು, ಜಯಚಾಮರಾಜಪುರ ಗ್ರಾಮ ಪಂಚಾಯತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ರವರ ಟ್ರಾಪ್ ಪ್ರಕರಣದಲ್ಲಿನ ಆರೋಪವು ಮೇಲ್ನೋಟಕ್ಕೆ ಸಾಬೀತಾಗಿರುವ ಹಿನ್ನೆಲೆಯಲ್ಲಿ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 48(4) ಮತ್ತು 43(ಎ) ರನ್ವಯ ಜಯಚಾಮರಾಜಪುರ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಸ್ಥಾನದಿಂದ ವಜಾ ಮಾಡಿ ಸದಸ್ಯತ್ವ ರದ್ದುಪಡಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

17/2/18

**(ಮುಬಾರಕ್ ಅಹ್ಮದ್),**
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ:**

1. ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ತುಮಕೂರು, ತುಮಕೂರು ಜಿಲ್ಲೆ.
3. ಕಾರ್ಯನಿರ್ವಾಹಕಾಧಿಕಾರಿ, ತಾಲ್ಲೂಕು ಪಂಚಾಯಿತಿ ಚಿಕ್ಕನಾಯಕನಹಳ್ಳಿ, ತುಮಕೂರು ಜಿಲ್ಲೆ.
4. ಶ್ರೀ ಶಿವಾನಂದ, ಅಧ್ಯಕ್ಷರು, ಜಯಚಾಮರಾಜಪುರ ಗ್ರಾಮ ಪಂಚಾಯತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ.
5. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಜಯಚಾಮರಾಜಪುರ ಗ್ರಾಮ ಪಂಚಾಯತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ.
6. ಗಣಕ ಶಾಖೆ.
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿಯನ್ನು ಮಾಹಿತಿಗಾಗಿ:**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.

ಹೊರಡಿಸಿದೆ
..........................ದಿನಾಂಕ
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ